# ಉಪನ್ಯಾಸ:
# "ಕೀಟಗಳ ವಿಸ್ಮಯ ಲೋಕ ಮತ್ತು ಪ್ರಾತ್ಯಕ್ಷಿಕೆ"

ದಿನಾಂಕ: 09.09.2023 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ಶ್ರೀ ಲಕ್ಷ್ಮೀ ರಂಗನಾಥ ಪ್ರೌಢ ಶಾಲೆ (ಸರ್ಕಾರಿ ಅನುದಾನಿತ), ಗುಳೆದಗುಡ್ಡ** ಇವರ ಸಂಯುಕ್ತ ಆಶ್ರಯದಲ್ಲಿ **"ಕೀಟಗಳ ವಿಸ್ಮಯ ಲೋಕ"** ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ **ಶ್ರೀ ಲಕ್ಷ್ಮೀ ರಂಗನಾಥ ಪ್ರೌಢ ಶಾಲೆ (ಸರ್ಕಾರಿ ಅನುದಾನಿತ), ಗುಳೇದಗುಡ್ಡ** ತಾ: ಬಾದಾಮಿ ಜಿ: ಬಾಗಲಕೋಟೆಯ **ಒಟ್ಟು** 50 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಹೆಚ್.ಪಿ ಮಹೇಶ್ವರಪ್ಪ** ಸಂಶೋಧನಾ ನಿರ್ದೇಶಕರು, ತೋ.ವಿ.ವಿ ಬಾಗಲಕೋಟೆ ಹಾಗೂ ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಹೆಚ್.ಪಿ ಮಹೇಶ್ವರಪ್ಪ** ಸಂಶೋಧನಾ ನಿರ್ದೇಶಕರು, ತೋ.ವಿ.ವಿ ಬಾಗಲಕೋಟೆ ರವರು, ವಿದ್ಯಾರ್ಥಿಗಳಿಗೆ ಕೀಟಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತ, ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ದೊರಕುವ ಕೀಟಗಳ ಜೀವನ ವೈಖರಿ ಬಗ್ಗೆ ತಿಳಿದುಕೊಳ್ಳುವ ಹವ್ಯಾಸವನ್ನು ಕೂಡ ಹೆಚ್ಚಿಸಿಕೊಳ್ಳಬೇಕೆಂದು ತಿಳಿಸಿದರು.

ಅದರಂತೆ, ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದಂತಹ **ಡಾ. ಟಿ.ಬಿ.ಅಳ್ಳೊಳ್ಳಿ** ಕುಲಸಚಿವರು ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಪರಿಸರ ಸಂರಕ್ಷಣೆಯಲ್ಲಿ ಹಾಗೂ ಬೆಳವಣಿಗೆಯಲ್ಲಿ ಕೀಟಗಳ ಉಪಯುಕ್ತಕರ ಕಾರ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿದರು, ಅದರಂತೆ, ಕೀಟಗಳ ಅದ್ಭುತ ಕಾರ್ಯವೈಖರಿಯನ್ನು ಶರಣರ ವಚನಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿದರು.

ತದನಂತರ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀ ಬಿ.ಕೆ. ದೊಡ್ಡಮನಿ** ಮುಖ್ಯೋಪಾದ್ಯಯರು, ಶ್ರೀ ಲಕ್ಷ್ಮೀ ರಂಗನಾಥ ಪ್ರೌಢ ಶಾಲೆ, ಗುಳೆದಗುಡ್ಡ ರವರು ಮಾತನಾಡಿ, ಸದರಿ ಉಪನ್ಯಾಸ ಕಾರ್ಯಕ್ರಮಕ್ಕಾಗಿ ತಮ್ಮ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು ಹಾಗೂ ಮುಂಬರುವ ದಿನಗಳಲ್ಲಿ ಕೇಂದ್ರದ ವತಿಯಿಂದ ಆಯೋಜಿಸಲಾಗುವ ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಅತ್ಯುತ್ಸಾಹದಿಂದ ಭಾಗವಹಿಸುವುದಾಗಿ ತಿಳಿಸಿದರು.

ಮುಂದುವರೆದು, ಕಾರ್ಯಕ್ರಮದ ಮುಖ್ಯ ಘಟ್ಟವಾದ "ಕೀಟಗಳ ವಿಸ್ಮಯ ಲೋಕ" ಉಪನ್ಯಾಸವನ್ನು **ಡಾ. ರಾಮನಗೌಡ ಎಸ್.ಹೆಚ್.** ಸಹಾಯಕ ಪ್ರಾಧ್ಯಾಪಕರು, ಕೀಟಶಾಸ್ತ್ರ ವಿಭಾಗ, ತೋವಿ.ವಿ. ಬಾಗಲಕೋಟೆ. ರವರು ವಿದ್ಯಾರ್ಥಿಗಳ ಮನಮುಟ್ಟುವಂತೆ ನಡೆಸಿಕೊಟ್ಟರು.

ಸದರಿ ಉಪನ್ಯಾಸದಲ್ಲಿ **ಕೀಟಗಳ ಆಯಸ್ಸು, ಕೀಟಗಳ ಆಹಾರ, ಕೀಟಗಳ ಸಂವಹನ ಶಕ್ತಿ** ಹಾಗೂ ಇನ್ನಿತರ ಅದ್ಭುತ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮವನ್ನು **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್, ನಿರೂಪಿಸಿದರು, **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ರವರು ವಂದಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ **ಗಂಗನಗೌಡ ಪಾಟೀಲ,** ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ, ಶಿಕ್ಷಕರು ಶ್ರೀ ಲಕ್ಷ್ಮೀ ರಂಗನಾಥ ಪ್ರೌಢ ಶಾಲೆ (ಸರ್ಕಾರಿ ಅನುದಾನಿತ), ಗುಳೇದಗುಡ್ಡ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.












SRSC/BGK/01/01/2020-21


SRSC/BGK/01/01/2020-21




KEETAVISMAYA




Habit and Habitat


Acoustic
communication








ವಿಜ್ಞಾನ ಕೇಂದ್ರ ಬಾಗಲಕೋಟೆ

*************